ಜಿಲ್ಲಾ ಹಾಗೂ ತಾಲ್ಲೂಕು ಪುನರ್ ವಿಂಗಡಣೆ ಬಗ್ಗೆ

495 ಶ್ರೀ ಜಿ. ರಾಜೂಗೌಡ (ಹನೂರು) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಮತ್ತು ತಾಲೂಕು ಪುನರ್ ವಿಂಗಡಣೆಯ ಬಗ್ಗೆ ಶಿಫಾರಸ್ಸು ಮಾಡಿರುವ ವಾಸುದೇವ ಹುಂಡೇಕಾರ ಮತ್ತು ಗದ್ದೀಗೌಡರ ಸಮಿತಿಗಳ ಶಿಫಾರಸ್ಸು ಬಗ್ಗೆ ಅಧ್ಯಯನ ನಡೆಸಲು ಸಂಪುಟದ ಉಪಸಮಿತಿಯನ್ನು ನೇಮಿಸಲು ಸರ್ಕಾರ ಇಚ್ಛಿಸಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಇದನ್ನು ಕಾರ್ಯಗೊಳಿಸಲಾಗುವುದು?

ಇ) ಇದರಿಂದ ಸರ್ಕಾರಕ್ಕೆ ತಗಲುವ ವೆಚ್ಚ ಎಷ್ಟಾಗಬಹುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಹೌದು

ಆ). ಆದಷ್ಟು ಬೇಗ ಕಾರ್ಯಗೊಳಿಸಲಾಗುವುದು.

ಇ) ಇದು ಪ್ರಾರಂಭಿಕ ಹಂತದಲ್ಲಿರುವುದರಿಂದ ಸರ್ಕಾರಕ್ಕೆ ತಗಲುವ ವೆಚ್ಚ ಎಷ್ಟಾಗಬಹುದೆಂದು ನಿಖರವಾಗಿ ತಿಳಿಸಲು ಸಾಧ್ಯವಿರುವುದಿಲ್ಲ.

ಶ್ರೀ ಜಿ. ರಾಜೂಗೌಡ :– ಈ ಮೂರು ಆಯೋಗಗಳು ಸರ್ಕಾರಕ್ಕೆ ತಮ್ಮ ವರದಿಗಳನ್ನು ಸಲ್ಲಿಸಿವೆ. ಯಾವ ಯಾವ ಆಯೋಗದವರು ಯಾವ ಯಾವ ಜಿಲ್ಲೆಗಳನ್ನು ಯಾವ ಯಾವ ತಾಲೂಕುಗಳನ್ನು ಪುನರ್ ವಿಂಗಡಿಸಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಮತ್ತು ಅವುಗಳಲ್ಲಿರತಕ್ಕ ವ್ಯತ್ಯಾಸಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಈ 3 ಸಮಿತಿಗಳ ವರದಿಗಳೂ ನನ್ನ ಹತ್ತಿರ ಇಲ್ಲ. ಇಲ್ಲಿ ತಾವು ಏನು ಪ್ರಶ್ನೆಯನ್ನು ಕೇಳಿದ್ದೀರೆಂದರೆ "Whether the Government has decided to appoint a Cabinet sub-committee to study the recommendations of Vasudeva, Hundekar and Gaddi Gowdar Report on re-organisation of Districts and Taluks?" ಎಂದು ಕೇಳಿದ್ದೀರಿ. ನಾವು ಸಬ್ ಕಮಿಟಿಯನ್ನು ರಚನೆ ಮಾಡಿದ್ದೇವೆ. ಈ ಮೂರು ವರದಿಗಳನ್ನೂ ಅಧ್ಯಯನ ಮಾಡಿ ಯಾವ ಯಾವ ಜಿಲ್ಲೆಗಳನ್ನು ಮತ್ತು ಯಾವ ಯಾವ ತಾಲೂಕುಗಳನ್ನು ಪುನರ್‌ವಿಂಗಡಣೆ ಮಾಡಬೇಕೆಂಬ ಬಗ್ಗೆ ಈ ಸಬ್ ಕಮಿಟಿಯ ರೆಕಮೆಂಡೇಷನ್ಸ್ ಸರ್ಕಾರಕ್ಕೆ ಬಂದಮೇಲೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಜೂಗೌಡ :– ಹಿಂದಿನ ಕಂದಾಯ ಮಂತ್ರಿಗಳಾಗಿದ್ದಂತ ಮಾನ್ಯ ಕೆ.ಹೆಚ್. ಪಾಟೀಲ್‌ರವರು 90–91ರಲ್ಲಿ ಜಿಲ್ಲಾ ಮತ್ತು ತಾಲೂಕುಗಳ ಪುನರ್ ವಿಂಗಡಣೆ ಮಾಡುತ್ತೇವೆಂದು ಹೇಳಿದ್ದರು. ಅದು ಸರ್ಕಾರದ ಜಂಟಿ ಜವಾಬ್ದಾರಿ ಅಲ್ಲವೆ? ಇದರ ಬಗ್ಗೆ ತಮ್ಮ ಅಭಿಪ್ರಾಯವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಇದರ ಸಲುವಾಗಿ ಕ್ಯಾಬಿನೆಟ್ ಸಬ್ ಕಮಿಟಿಯನ್ನು ನಾವು ರಚನೆ ಮಾಡಿದ್ದೇವೆ. ಆ ಸಬ್ ಕಮಿಟಿಯವರು ವರದಿಯನ್ನು ಕೊಟ್ಟ ಮೇಲೆ ಯಾವು ಯಾವುದನ್ನು ಮಾಡಬೇಕೆಂದು ನೋಡಿಕೊಂಡು ನಂತರ ಕ್ರಮ ತೆಗೆದುಕೊಳ್ಳುತ್ತೇವೆ. ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಆದರೆ ಎಷ್ಟು ಬೇಗ ಮಾಡುವುದಕ್ಕೆ ಸಾಧ್ಯ ಅಷ್ಟು ಬೇಗನೆ ಮಾಡುವ ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಈಗತಾನೆ ಮಾನ್ಯ ಸಚಿವರು ಹೇಳಿದಂತೆ ಆ ವರದಿಗಳನ್ನು ಕ್ಯಾಬಿನೆಟ್ ಸಬ್ ಕಮಿಟಿಯ ಮುಂದಿಟ್ಟಿದ್ದಾರೆಂದು ತಿಳಿದುಬಂತು. ನನಗೆ ತಿಳಿದಂತೆ ಆ ವರದಿಗಳು ಬಂದು ಬಹಳ ದಿವಸವಾಯಿತು. ಈ ವರದಿಗಳ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಈ ಸದನದ ಅಭಿಪ್ರಾಯವನ್ನು ತೆಗೆದುಕೊಂಡು ಅಥವಾ ಶಾಸಕರ ಅಭಿಪ್ರಾಯ ತೆಗೆದುಕೊಂಡು ಆನಂತರ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಾ? ಅಥವಾ ಸರ್ಕಾರದವರೇ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೀರಾ ಎಂಬುದನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷಣೀಯವರೇ ಅವರಿಗೂ ಕೂಡ ಗೊತ್ತಿದೆ. ಪ್ರಥಮವಾಗಿ ವಾಸುದೇವ ಕಮಿಟಿಯ ರಿಪೋರ್ಟ್ ಬಂದ ಮೇಲೆ ಮುಂದೆ ಹುಂಡೇಕಾರ್ ಕಮಿಟಿಯನ್ನು ತಾವೇ ರಚಿಸಿದ್ದೀರಿ. ಅದರಲ್ಲಿ ಕೆಲವು ಲೋಪದೋಷಗಳಿವೆ ಎಂದು ಹೇಳಿ ಕೆಲವು ತಿದ್ದುಪಡಿಯಾಗಬೇಕು ಸರಿಯಿಲ್ಲವೆಂದು ಬಂದ ಪಬ್ಲಿಕ್ ರೆಪ್ರೆಸೆಂಟೇಷನ್ ಮೇಲೆ ಶಾಸಕರ ರೆಪ್ರೆಸೆಂಟೇಷನ್ ಮೇಲೆ, ಮತ್ತು ಯಾರು ಯಾರಿಗೆ ಅಫೆಕ್ಟ್ ಆಗಿತ್ತೋ ಅವರು ರೆಪ್ರೆಸೆಂಟೇಷನ್ ಮಾಡಿದ ಮೇಲೆ ಈ ಗದ್ದಿಗೌಡರ ಕಮಿಟಿಯನ್ನು ತಾವು ಕಾನ್‌ಸ್ಟಿಟ್ಯೂಟ್ ಮಾಡಿದಿರಿ. ಈಗ ಅವರು ಇದನ್ನೆಲ್ಲ ಯೋಚನೆ ಮಾಡಿ ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಇದರ ಮೇಲೆ ಇವತ್ತು ಕ್ಯಾಬಿನೇಟ್ ಸಬ್ ಕಮಿಟಿಯ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂದರೆ ಅವರು ಕೊಟ್ಟಂಥ ರಿಪೋರ್ಟ್ ಏನಿದೆ ಅದರಲ್ಲಿ ಎಷ್ಟು ಜಿಲ್ಲೆಗಳನ್ನು ಇವತ್ತು ಅಕ್ಸೆಪ್ಟ್ ಮಾಡಬಹುದು, ಸದ್ಯದ ಒಂದು ಆರ್ಥಿಕ ಪರಿಸ್ಥಿತಿಯಲ್ಲಿ ಎಷ್ಟು ತಾಲ್ಲೂಕುಗಳನ್ನು ಮಾಡಬಹುದು ಎನ್ನತಕ್ಕಂಥ ನಿರ್ಣಯವನ್ನು ಸಬ್ ಕಮಿಟಿ ತೆಗೆದುಕೊಳ್ಳಬಹುದು. ಅದರ ಮೇಲೆ ನಮಗೆನಿಸುತ್ತದೆ, ಎಲ್ಲರನ್ನು ಕೇಳಿ ಓಪನ್ ಡಿಸ್‌ಕಷ್ಷನ್ ಆದ ಮೇಲೆ ಬಹುಶಃ ಹಿಂದಿನ ಸರ್ಕಾರ ಈ ಒಂದು ನಿರ್ಣಯಕ್ಕೆ ಬಂದಿದೆ. ಈಗ ನಾವು ಆ ರಿಪೋರ್ಟನ್ನು ಮಾತ್ರ ಎಕ್ಸಾಮಿನ್ ಮಾಡುತ್ತಿದ್ದೇವೆ. ಏತಕ್ಕೆಂದರೆ ಇದಕ್ಕೆ ಇಲ್ಲಿಯವರೆಗೆ ಯಾವ ಅಬ್ಜೆಕ್ಷನ್ ಬಂದಿಲ್ಲ. ಮತ್ತು ಸಬ್ ಕಮಿಟಿಯ ಮುಂದೆ ಇದು ಈಗಾಗಲೇ ಇದೆ. ಸಬ್ ಕಮಿಟಿಯು ಒಂದು ನಿರ್ಣಯವನ್ನು ತೆಗೆದುಕೊಂಡ ಮೇಲೆ ಖಂಡಿತವಾಗಿ ಯಾವ ನಿರ್ಣಯ ತೆಗೆದುಕೊಳ್ಳುತ್ತದೆ, ಅದನ್ನು ನಾವು ಸಭೆಗೆ ತಿಳಿಸುತ್ತೇವೆ.

ಒಬ್ಬ ಮಾನ್ಯ ಸದಸ್ಯರು :– ಮಾನ್ಯ ಅಧ್ಯಕ್ಷಿಣೀಯವರೇ ಮಾನ್ಯ ಕಂದಾಯ ಸಚಿವರನ್ನು ಕೇಳುವುದೇನೆಂದರೆ, ಹಿಂದಿನ ಕಂದಾಯ ಸಚಿವರಾಗಿದ್ದ ಮಾನ್ಯ ಕೆ.ಹೆಚ್. ಪಾಟೀಲರು ಗದಗನ್ನು ಜಿಲ್ಲೆ ಮಾಡುತ್ತೇವೆಂದು ಅವರು ಅನೌನ್ಸ್ ಮಾಡಿದ್ದರು. ಅದರ ಬಗ್ಗೆ ಸನ್ಮಾನ್ಯ ಸಚಿವರನ್ನು ಅದು ಏನಾಗಿದೆ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಈಗ ವರದಿಯಲ್ಲಿರುವುದನ್ನು ಮಾತ್ರ ಹೇಳಬಹುದು. ಆದರೆ ಅವರು ಈ ಬಗ್ಗೆ ಘೋಷಣೆ ಮಾಡಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ :– ಮಾನ್ಯ ಅಧ್ಯಕ್ಷರೇ, ಒಂದು ಜಿಲ್ಲೆಯನ್ನು ಹೊಸದಾಗಿ ಕ್ರಿಯೇಟ್ ಮಾಡಬೇಕಾದರೆ ಅಂದಾಜು ವೆಚ್ಚ ಎಷ್ಟಾಗಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಅದರ ಫೈನಾನ್ಸ್ ಫೀಸಿಬಿಲಿಟಿ ರಿಪೋರ್ಟ್ ನನ್ನ ಹತ್ತಿರವಿಲ್ಲ. 30 ಕೋಟಿ ರೂಪಾಯಿಗಳೆಂದು ಹೇಳುತ್ತಾರೆ. ಆದರೆ ಅದರ ಸಂಪೂರ್ಣವಾದ ಮಾಹಿತಿ ನನ್ನ ಕಡೆ ಇಲ್ಲ. ಏತಕ್ಕೆಂದರೆ ಕೆಲವುಕಡೆ ಬಿಲ್ಡಿಂಗ್ಸ್ ಇದ್ದರೆ ಅದನ್ನು ತೆಗೆದುಕೊಂಡು ಮಾಡಬಹುದು. ಕೆಲವು ಕಡೆ ಕಟ್ಟಿಸತಕ್ಕಂಥದ್ದು ಬರುತ್ತದೆ. ಕೆಲವು ಕಡೆ ಇನ್‌ಫ್ರಾಸ್ಟ್ರಕ್ಚರ್ ರೆಡಿ ಇರುತ್ತದೆ. ಅಂಥ ಕಡೆ ಕಡಿಮೆ ಖರ್ಚು ಬರಬಹುದು. ಅದಕ್ಕೆ ವಿವರವಾದ ಮಾಹಿತಿ ಇಲ್ಲ. ಅದಕ್ಕಾಗಿ ನಾನು ಇಷ್ಟೇ ಖರ್ಚಾಗುತ್ತದೆಂದು ಸ್ಪಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ ಹಿಂದಿನ ಕಾಲಕ್ಕೂ ಈ ಕಾಲಕ್ಕೂ ಹೋಲಿಸಿದರೆ ಸಾಕಷ್ಟು ಬದಲಾವಣೆಗಳಾಗಿವೆ. ಕಮ್ಯುನಿಕೇಶನ್ಸ್ ಬದಲಾವಣೆಯಾಗಿದೆ. ನಾವು ಹೋಗಿಬರತಕ್ಕಂಥ ವಾಹನಸೌಕರ್ಯಗಳು ಕೂಡ ಬದಲಾವಣೆಯಾಗಿದೆ. ವೇಗವಾಗಿ ಹೋಗಿ ಬರತಕ್ಕಂಥ ಅವಕಾಶವಿದೆ. ಟೆಲಿಫೋನ್ ಇದೆ. ಟೆಲೆಕ್ಸ್ ಇದೆ, ಅದರ ಜೊತೆಗೆ ಇವತ್ತಿನ ದಿವಸ ನಿಮಿಷಾರ್ಧದಲ್ಲಿ ಎಲ್ಲಿಂದೆಲ್ಲಿಗೆ ಬೇಕಾದರೂ ಕಾಗದವನ್ನು ರವಾನೆ ಮಾಡತಕ್ಕಂಥ ಫ್ಯಾಕ್ಸ್ ಮಿಶನ್‌ಗಳು ಕೂಡ ಇವೆ. ಕಂಪ್ಯೂಟರ್ಸ್ ಸಿಸ್ಟಮ್ ಇದೆ. ಇದೆಲ್ಲ ಗಮನದಲ್ಲಿಟ್ಟುಕೊಂಡು ತಾವು ಈ ಜಿಲ್ಲೆಗಳನ್ನು ಏತಕ್ಕೆ ಹೆಚ್ಚು ಮಾಡಬೇಕು? ಏಕೆಂದರೆ ಹೊಸ ಜಿಲ್ಲೆ ಮಾಡಲು 30 ಕೋಟಿ ರೂಪಾಯಿಗಳು ಖರ್ಚು ಬರುತ್ತದೆಂದು ಹೇಳುತ್ತಾರೆ. ಅಪ್ರಾಕ್ಸಿಮೇಟಾಗಿ ಎಂದು ನೀವು ಹೇಳಿದ್ದನ್ನೇ ನಾನು ಹೇಳುತ್ತಿದ್ದೇನೆ. 30 ಕೋಟಿ ರೂಪಾಯಿ ಹಣ ಒಂದು ಜಿಲ್ಲೆಗೆ ಹೆಚ್ಚಿಗೆ ಖರ್ಚು ಬರತಕ್ಕಂಥ ಪರಿಸ್ಥಿತಿಯಲ್ಲಿ ಈ ಹಣವನ್ನು ಉಳಿಸುವುದಕ್ಕೋಸ್ಕರ ಜಿಲ್ಲೆಗಳನ್ನು ಹೆಚ್ಚಿಗೆ ಮಾಡದೆ, ಅಡಳಿತಾತ್ಮಕ ಸುಧಾರಣೆಗಳು ಪ್ರಪಂಚದಲ್ಲಿ ಬಂದಿರುವುದರಿಂದ ವಿಜ್ಞಾನ ದೇಶದಲ್ಲಿ ಬೆಳೆಯುತ್ತಿರತಕ್ಕಂಥ ಸಂದರ್ಭದಲ್ಲಿ, ತಾವು ಅವುಗಳನ್ನು

ಉಪಯೋಗಿಸಿಕೊಂಡು ಹಣದ ಖರ್ಚು ಕಡಿಮೆ ಮಾಡಿ, ಆ ಹಣವನ್ನು ರಾಜ್ಯದ ಜನತೆಯ ಅಭಿವೃದ್ಧಿಗೆ ಉಪಯೋಗಿಸಿ ಜಿಲ್ಲೆಗಳನ್ನು ಕಡಿಮೆ ಮಾಡುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷೆಯವರೇ ನಾವು ಜಿಲ್ಲೆಗಳನ್ನು ಕಡಿಮೆ ಮಾಡಬೇಕೆಂದು ಹೇಳಿ ಈ ಕಮಿಟಿಯನ್ನು ಮಾಡಿಲ್ಲ. ಅಡ್ಮಿನಿಸ್ಟ್ರೇಷನ್ ಕನ್‌ವೀನಿಯನ್ಸ್‌ಗೋಸ್ಕರ, ಜಿಯಾಗ್ರಫಿಕಲ್ ಕಂಟಿನ್ಯೂಯಿಟಿ ಪಾಪ್ಯುಲೇಷನ್ ಇದನ್ನೆಲ್ಲ ಲೆಕ್ಕಕ್ಕೆ ತೆಗೆದುಕೊಂಡು, ಎಲ್ಲರಿಗೂ ಸಹಾಯವಾಗಬೇಕೆಂಬ ದೃಷ್ಟಿಯಿಂದಲೇ ಈ ಕಮಿಟಿಗಳನ್ನು ರಚಿಸಿ, ಯಾರು ಯಾರಿಗೆ ಇನ್‌ಕನ್‌ವೀನಿಯನ್ಸ್ ಆಗಿದೆ ಅಂಥವರಿಗೆ ಒಂದು ಕನ್‌ವೀನಿಯನ್ಸ್ ಮಾಡಿಕೊಡಬೇಕೆಂಬ ದೃಷ್ಟಿಯಿಂದ ಒಂದು ಕಮಿಟಿಯನ್ನು ರಚಿಸಿದ್ದೇವೆ. ಅದಕ್ಕಾಗಿ ಹಣದ ಕೊರತೆಯಿದ್ದ ಕಾರಣ ಈ ನಿರ್ಣಯವನ್ನು ಹಾಗೆಯೇ ಇಟ್ಟಿದ್ದೇವೆ. ಇಲ್ಲದಿದ್ದರೆ ಹಿಂದಿನ ಸರ್ಕಾರವೇ ಈ ನಿರ್ಣಯವನ್ನು ತೆಗೆದುಕೊಳ್ಳುತ್ತಿದ್ದರು. ಅದು ಹತ್ತುಕೋಟಿ ಬರುತ್ತದೋ ಮೂವತ್ತು ಕೋಟಿ ಬರುತ್ತದೋ ಮುನ್ನೂರು ಕೋಟಿ ಬರುತ್ತದೋ ಎಕ್ಸಾಟ್ ಫಿಗರ್ಸ್ ಇಲ್ಲ. ಆದರೆ ನಾನು ಹೇಳತಕ್ಕಂಥದ್ದು, ಇದೆಲ್ಲ ಮಾಹಿತಿ ಇದ್ದರೂ ಕೂಡ ತಮ್ಮ ಜಿಲ್ಲೆ ಕೋಲಾರ ಜಿಲ್ಲೆಯನ್ನು ಬೆಂಗಳೂರು ಜಿಲ್ಲೆಯಲ್ಲಿ ಮರ್ಜ್ ಆಗಲು ಒಪ್ಪುತ್ತಾರೆಯೇ? ಸವಲತ್ತುಗಳು ಇವೆ ಎಂದು ಯಾರೂ ಸಹ ಮರ್ಜ್ ಆಗುವುದಿಲ್ಲ. ಆದರೂ ಕೂಡ ಕನ್‌ವೀನಿಯಂಟ್ ದೃಷ್ಟಿಯಿಂದಲೂ ನೋಡಬೇಕು. ಎಕಾನಮಿ ದೃಷ್ಟಿಯಿಂದಲೂ ನೋಡಬೇಕು. ಹಣದ ಕೊರತೆ ಇದೆ ಎಂದು ಹಿಂದಿನವರು ಸಹ ಹೊಸದಾಗಿ ಜಿಲ್ಲೆಯನ್ನು ಕ್ರಿಯೇಟ್ ಮಾಡಲಿಲ್ಲ. ನಾವು ಅದನ್ನು ಎಕ್ಸಾಮಿನ್ ಮಾಡುತ್ತಿದ್ದೇವೆ. ಎಷ್ಟರ ಮಟ್ಟಿಗೆ ನಮಗೆ ಶಕ್ತಿ ಇದೆ ಎಷ್ಟರ ಮಟ್ಟಿಗೆ ಮಾಡಬಹುದು ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆ.

ಶ್ರೀ ಜಿ. ರಾಜೂಗೌಡ :– ಈ ಬಗ್ಗೆ ವರದಿಯನ್ನು ಸಚಿವ ಸಂಪುಟದ ಉಪಸಮಿತಿ ಸರ್ಕಾರಕ್ಕೆ ಸಲ್ಲಿಸುವುದಕ್ಕೆ ಮೊದಲೇ ಏಕೆ ಬೆಂಗಳೂರು ಜಿಲ್ಲೆಯನ್ನು ನಗರ ಜಿಲ್ಲೆ ಮತ್ತು ಗ್ರಾಮಾಂತರ ಜಿಲ್ಲೆ ಎಂದು ಎರಡು ಭಾಗ ಮಾಡಿದಿರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಹಿಂದಿನ ಸರ್ಕಾರದವರು ಹುಂಡೇಕರ್ ಸಮಿತಿಯ ಶಿಫಾರಸ್ಸಿನ ಮೇರೆಗೆ ಮಾಡಿದ್ದಾರೆ. ಬಹು ದೊಡ್ಡ ಜಿಲ್ಲೆ ಇದೆ ಎಂದು ಎರಡು ಭಾಗ ಮಾಡಿದ್ದಾರೆ. ಬೇರೆಯದಕ್ಕೆ ಯಾವ ರೀತಿ ಮಾಡಬೇಕೆಂಬುದಕ್ಕೆ ಸಮಿತಿಯ ವರದಿ ಇದೆ. ಅದು ತಮಗೂ ಗೊತ್ತಿದೆ. ತಮಗೂ ಅನುಕೂಲವಾಗುವ ರೀತಿಯಲ್ಲಿ ಇರಬಹುದು. ಬೆಂಗಳೂರು ಜಿಲ್ಲೆಯನ್ನು ಏತಕ್ಕೆ ಮಾಡಿದ್ದಾರೆಂದು ಹೇಳುವುದಕ್ಕೆ ಬರುವುದಿಲ್ಲ, ಅಡ್ಮಿನಿಸ್ಟ್ರೇಷನ್ ಕನ್‌ವೀನಿಯಂಟ್‌ಗೋಸ್ಕರ ಮಾಡಿದ್ದಾರೆ.

ಶ್ರೀ ಎಂ. ಮಹಾದೇವ್ :– ಹುಂಡೇಕರ್ ಸಮಿತಿಯು ಸರಿಯಾಗಿ ವರದಿ ಮಾಡಿತ್ತು. ಆದರೆ ಹುಂಡೇಕರ್ ಸಮಿತಿಯ ವರದಿ ಸರಿಯಿಲ್ಲವೆಂದು ಆಗಿನ ಜನತಾ ಸರ್ಕಾರ ಗದ್ದಿಗೆಗೌಡರ ಸಮಿತಿಯನ್ನು ಮಾಡಿದರು. ಆ ಸಮಿತಿಯು ಸರಿಯಾಗಿ ಮಾಡಿಲ್ಲವೆಂಬ ದೂರು ಬಹುತೇಕ ಇದೆ. ಇವತ್ತಿನ ದಿವಸ ವಾಸುದೇವಯ್ಯನವರ ಸಮಿತಿ, ಹುಂಡೇಕರ್ ಸಮಿತಿ ಮತ್ತು ಗದ್ದಿಗೇಗೌಡರ ಸಮಿತಿ ಈ ಮೂರೂ ಸಮಿತಿಗಳು ನೀಡಿರತಕ್ಕ ವರದಿ ಸರಿಯಿಲ್ಲವೆಂದು ಅವುಗಳನ್ನು ರದ್ದು ಮಾಡಿ ಇನ್ನೊಂದು ಕಮಿಟಿ ಮಾಡುವುದಕ್ಕೆ ಸರ್ಕಾರ ಪರಿಶೀಲಿಸುತ್ತದೆಯೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ನಾನು ಆಗಲೇ ಹೇಳಿದೆ, ನಾವು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ; ಅದರಲ್ಲಿ ಪರಿಶೀಲಿಸುತ್ತಾರೆ. ಯಾವುದು ಸರಿ ಇದೆ ಅಥವಾ ಇಲ್ಲ ಎಂಬುದನ್ನು ಅಲ್ಲಿ ನೋಡುತ್ತಾರೆ.

ಪ್ರಶ್ನೆ : 616 – ಶ್ರೀ ಸೌದತ್ ಆಲಿ ಖಾನ್ – (ಸದಸ್ಯರು ಹಾಜರಿರಲಿಲ್ಲ)

ಪ್ರಶ್ನೆ : 636 – ಶ್ರೀ ಬಿ.ಹೆಚ್. ಯಂಕಾನಾಯಕ್ – (ಸದಸ್ಯರು ಹಾಜರಿರಲಿಲ್ಲ)